# ರಾಷ್ಟ್ರೀಯ ಸೇವಾ ಯೋಜನೆ, ಘಟಕ– 1 ಮತ್ತು ಘಟಕ– 2

**ಜಿಲ್ಲಾ ಮಟ್ಟದ ಯುವ ಸಂಸತ್ತು ಕಾರ್ಯಕ್ರಮ:**

ದಿನಾಂಕ: 25–01–2019ರಂದು ಬೆಳಿಗ್ಗೆ 10.30 ಘಂಟೆಗೆ ಸರ್ಕಾರಿ ಮಹಿಳಾ ಕಾಲೇಜು, ಚಿಂತಾಮಣಿ ಇಲ್ಲಿ ಜಿಲ್ಲಾ ಮಟ್ಟದ ಯುವ ಸಂಸತ್ತು ಕಾರ್ಯಕ್ರಮವನ್ನು ರಾಷ್ಟ್ರೀಯ ಸೇವಾ ಯೋಜನೆ ಘಟಕ–1 ಮತ್ತು ಘಟಕ–2ರ ವತಿಯಿಂದ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಮ್ಮ ಪ್ರಾಂಶುಪಾಲರಾದ ಶಿವಶಂಕರ್ ಪ್ರಸಾದ್‌ರವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ತೀರ್ಪುಗಾರರಾಗಿ ಮತ್ತು ಅತಿಥಿಗಳಾಗಿ ವಿವೇಕಾನಂದ ಕಾಲೇಜಿನ ಪ್ರಾಂಶುಪಾಲರಾದ ವೆಂಕಟಶಿವಾರೆಡ್ಡಿ, ಚಿಂತಾಮಣಿ ನಗರ ಪೋಲಿಸ್ ಠಾಣೆಯ ಶಾಬುದ್ದೀನ್, ಸಬ್–ಇನ್ಸ್‌ಪೆಕ್ಟರ್, ಪತ್ರಕರ್ತರಾದ ಕಾಗತಿ ನಾಗರಾಜಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಶ್ರೀನಿವಾಸ ಮತ್ತು ಸಮಾಜ ಸುಧಾರಕರು, ಮಾಜಿ ರೈತ ಮುಖಂಡರಾದ ಕುರುಟಹಳ್ಳಿ ರಾಧಾಕೃಷ್ಣರವರು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಡಾ. ವಿಜಯೇಂದ್ರಕುಮಾರ್ ಜಿ.ಎಲ್. ರವರು ನೆರವೇರಿಸಿದರು. ಮುಖ್ಯ ಅತಿಥಿಗಳ ಸ್ವಾಗತ ಭಾಷಣವನ್ನು ರಾಷ್ಟ್ರೀಯ

ಸೇವಾ ಯೋಜನೆ (ಘಟಕ–1) ಕಾರ್ಯಕ್ರಮಾಧಿಕಾರಿಗಳಾದ ಶ್ರೀದೇವಿ ಆರ್ ಮತ್ತು ರಾಷ್ಟ್ರೀಯ ಸೇವಾ ಯೋಜನೆ (ಘಟಕ–2) ಕಾರ್ಯಕ್ರಮಾಧಿಕಾರಿಗಳಾದ ರತ್ನಮ್ಮ ಕೆ.ವಿ. ರವರು ನೆರವೇರಿಸಿದರು.

**ಪ್ರಬಂಧ ಸ್ಪರ್ಧೆ:**

ಸರ್ಕಾರಿ ಮಹಿಳಾ ಕಾಲೇಜು, ಚಿಂತಾಮಣಿ ಇಲ್ಲಿನ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಸಾಕ್ಷರತಾ ಕ್ಲಬ್ ವತಿಯಿಂದ 11.12.2018ರಂದು 11 ಘಂಟೆಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಪ್ರಬಂಧ ಸ್ಪರ್ಧೆಯ ವಿಷಯ ಈ ರೀತಿ ಇತ್ತು. "ಇಂದಿನ ತಂತ್ರಜ್ಞಾನ ಯುಗದಲ್ಲಿ ಆನ್‌ಲೈನ್ ಮತದಾನ ಪದ್ಧತಿ"

**ಸ್ವಚ್ಛತಾ ಕಾರ್ಯಕ್ರಮ:**

ದಿನಾಂಕ 14.8.2018 ರಂದು ಕಾಲೇಜಿನ ಆವರಣವನ್ನು ರಾಷ್ಟ್ರೀಯ ಸೇವಾ ಯೋಜನೆ ಸ್ವಯಂ ಸೇವಕಿಯರು ಸ್ವಚ್ಛಗೊಳಿಸಿದರು. ಸ್ವಚ್ಛತಾ ಕಾರ್ಯಕ್ರಮದ ನಂತರ ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳಿಗೆ ಲಘು ಉಪಹಾರವನ್ನು ನೀಡಲಾಯಿತು.

ದಿನಾಂಕ 12.9.2018ರಂದು ಕಾಲೇಜಿನ ಆವರಣವನ್ನು ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳು ಸ್ವಚ್ಛಗೊಳಿಸಿದರು. ಸ್ವಚ್ಛತಾ ಕಾರ್ಯಕ್ರಮದ ನಂತರ ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳಿಗೆ ಲಘು ಉಪಹಾರವನ್ನು ನೀಡಲಾಯಿತು.

ದಿನಾಂಕ 02.10.2018 ರಂದು ಗಾಂಧಿಜಯಂತಿ ಅಂಗವಾಗಿ ಸರ್ಕಾರಿ ಪಾಲಿಟೆಕ್ನಿಕ್ ಸುತ್ತಮುತ್ತಲು ಸ್ವಚ್ಛಗೊಳಿಸಿದರು. ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳು ಸ್ವಚ್ಛತೆ ಬಗ್ಗೆ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

**ಜಾಥಾಕಾರ್ಯಕ್ರಮ:**

ದಿನಾಂಕ 08.09.2018ರಂದು ಸರ್ಕಾರಿ ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ–1 ಮತ್ತು 2 ಹಾಗೂ ಸ್ಕೌಟ್ಸ್&ಗೈಡ್ಸ್ ಮತ್ತು ಲಯನ್ಸ್ GEF Eye Hospital, ಬೂರಗಮಾಕಲಹಳ್ಳಿ, ಇವರ ಸಹಯೋಗದಲ್ಲಿ "ನೇತ್ರದಾನ ಮಹಾದಾನ" ಕಣ್ಣುಗಳ ಸುರಕ್ಷತೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ Snacks, Juice ಮತ್ತು ಉಪಹಾರ ನೀಡಲಾಯಿತು.

**ವಿದ್ಯಾರ್ಥಿನಿಯರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ:**

ದಿನಾಂಕ 07.09.2018ರಂದು ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ನಮ್ಮ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕ–1 ಮತ್ತು ಘಟಕ–2 ಹಾಗೂ ಸ್ಕೌಟ್ಸ್&ಗೈಡ್ಸ್ ವತಿಯಿಂದ ಏರ್ಪಡಿಸಲಾಗಿತ್ತು. ಸುಮಾರು 1500 ವಿದ್ಯಾರ್ಥಿನಿಯರು ಇದರ ನೆರವನ್ನು ಪಡೆದುಕೊಂಡರು.

ಸರ್ಕಾರಿ ಮಹಿಳಾ ಕಾಲೇಜು, ಚಿಂತಾಮಣಿ ಇಲ್ಲಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ–1 ಮತ್ತು ಘಟಕ–2ರ ವಾರ್ಷಿಕ ವಿಶೇಷ ಶಿಬಿರವನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ ದಿನಾಂಕ 21.3.2019ರಿಂದ 27.03.2019ರ ವರೆಗೆ ಬೂರಗಮಾಕಲಹಳ್ಳಿಯ ಸಂಜೀವ ಸಮುದಾಯ ಭವನದಲ್ಲಿ 7 ದಿನಗಳ ಕಾಲ ಹಮ್ಮಿಕೊಳ್ಳಲಾಗಿತ್ತು.

ಈ ಶಿಬಿರಕ್ಕೆ ಶಿಬಿರಾಧಿಕಾರಿಗಳಾಗಿ ಘಟಕ–1 ರ ನೇತೃತ್ವ ಪ್ರೊ. ಶ್ರೀದೇವಿ ಆರ್. ರವರು ಮತ್ತು ಘಟಕ–2 ರ ನೇತೃತ್ವ ಪ್ರೊ. ರತ್ನಮ್ಮ ಕೆ.ವಿ. ರವರು ವಹಿಸಿದ್ದರು. ಈ ಶಿಬಿರದ ಉದ್ಘಾಟನೆಯನ್ನು ನಮ್ಮ ಕಾಲೇಜಿನ ಪ್ರಾಂಶುಪಾಲರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಪ್ರೊ.ಸಣ್ಣೀರಯ್ಯರವರು ಭಾಗವಹಿಸಿ ದ್ವೇಷ, ಅಸೂಯೆ ಬಿಟ್ಟು ನಾವೆಲ್ಲರೂ ಒಂದೇ ಎಂಬ ಮನೋಭಾವನೆಯಿಂದ ಬಾಳಬೇಕು ಎಂದು ತಿಳಿಸಿದರು. ಈ ಶಿಬಿರದಲ್ಲಿ ಪ್ರಾಂಶುಪಾಲರು ಯುವ ಜನತೆಯಲ್ಲಿ ರಾಷ್ಟ್ರೀಯ ಭಾವೈಕ್ಯತೆ, ಸೇವಾ ಮನೋಭಾವನೆ ಮತ್ತು ಗ್ರಾಮಗಳ ಅಭಿವೃದ್ಧಿಗೆ ಯುವ ಜನತೆಯ ಪಾತ್ರವನ್ನು ತಿಳಿಸಿ 7 ದಿನಗಳ ಕಾಲ ವಿಶೇಷ ಶಿಬಿರ ಯಶಸ್ವಿಯಾಗುವಂತೆ ಕೋರಿದರು.

ಈ ಶಿಬಿರದಲ್ಲಿ ಯುವಜನತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಡಾ॥ ಸಾರಿಕಾರವರು ಕಣ್ಣಿನ ಸುರಕ್ಷತೆಯ ಬಗ್ಗೆ ತಿಳಿಸಿಕೊಟ್ಟರು. ಡಾ॥ ವಿಜಯ ವೆಂಕಟರಾಮ್‌ರವರು ಶಿಕ್ಷಣದ ಮೂಲಕ ದೌರ್ಜನ್ಯತಡೆಗಟ್ಟುವ ಕ್ರಮಗಳ ಬಗ್ಗೆ ವಿವರಣೆ ನೀಡಿದರು. 370ನೆಯ ವಿಧಿಯ ಬಗ್ಗೆ ಜಮ್ಮು ಕಾಶ್ಮೀರ ಭಾರತದ ಕಿರೀಟವಿದ್ದಂತೆ ಎಂದು ತಿಳಿಸಿದರು. ಕಲೆ ಮತ್ತು ಸಂಸ್ಕೃತಿಯ ಶ್ರೀಮಂತಿಕೆಯನ್ನು ಜಾನಪದ ಗೀತೆಗಳ ಮೂಲಕ ಮುನಿರೆಡ್ಡಿರವರು ತಿಳಿಸಿದರು.

ನಂತರ ಗ್ರಾಮೀಣಾಭಿವೃದ್ಧಿ ಯೋಜನೆಗಳ ಬಗ್ಗೆ ಪ್ರೊ.ಕೋನಕುಂಟ್ಲುರಾಯಪ್ಪರವರು ತಿಳಿಸಿದರು. 7ನೇ ದಿನ ಅಂತಿಮ ದಿನ ಸಮಾರೋಪ ಸಮಾರಂಭವನ್ನು ಏರ್ಪಡಿಸಿದ್ದೆವು. ಆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀನಿವಾಸಪುರ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕೆ.ವಿ. ವೆಂಕಟೇಶ್‌ರವರು ಆಗಮಿಸಿದ್ದರು. ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ತಿಳಿಸಿಕೊಟ್ಟರು. 7 ದಿನಗಳ ಶ್ರಮದಾನ, ವಿಶೇಷ ಉಪನ್ಯಾಸ ಕಾರ್ಯಕ್ರಮಗಳು ಉತ್ತಮವಾಗಿ ನಡೆಯಿತು ಎಂದು ತಿಳಿಸಿದರು. ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ದಿನಕ್ಕೊಂದರಂತೆ ಹಮ್ಮಿಕೊಂಡು ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿ ಶಿಬಿರದ ಯಶಸ್ವಿಗೆ ಪಾತ್ರರಾದರು ಎಂದು ಪ್ರೊ. ಶಿವಶಂಕರ್ ಪ್ರಸಾದ್‌ರವರು ತಿಳಿಸಿದರು. ಸಮಾರೋಪ ಸಮಾರಂಭ ಮುಕ್ತಾಯವಾಯಿತು. ಈ 7 ದಿನಗಳ ಶಿಬಿರದ ಯಶಸ್ವಿಗೆ ಕಾರಣಕರ್ತರಾದ ಸಹಾಯಕ ಶಿಬಿರಾಧಿಕಾರಿಗಳಾದ ಪ್ರೊ.ನವೀನ್‌ಕುಮಾರ್ ಮತ್ತು ಪ್ರೊ.ಕೆಂಪರಾಜು ಆರ್. ರವರು ಎಲ್ಲಾ ರೀತಿಯ ಉತ್ತಮ ಸಹಕಾರ ನೀಡಿದರು. ಎಲ್ಲಾ ಪ್ರಾಧ್ಯಾಪಕ ವೃಂದರವರು ಈ ಶಿಬಿರದ ಯಶಸ್ವಿಗೆ ಶ್ರಮಿಸಿದರು. ಒಟ್ಟಾರೆ ಶಿಬಿರ ಯಶಸ್ವಿಯಾಗಿ ನೆರವೇರಿತು.